

**ವಿಕ್ರಂ ಹತ್ವಾರ್**

ಕಲೆ: ಸಂತೋಷ್ ಸಸಿಹಿತ್ಲು

# ಹಗುರ ಹಕ್ಕಿಗಳು



ಬಳ್ಳಿ ಹಕ್ಕಿಯ ಕೊಕ್ಕಿನಲಿ ಒಣಹುಲ್ಲು
ಅದ ನೋಡುವಾಗೆಲ್ಲ ಅನ್ನಿಸುವುದು
ಗುಬ್ಬಚ್ಚಿ ಅದೆಷ್ಟು ದೊಡ್ಡ ಹಕ್ಕಿ!

'ಹಗುರ'
ಎಂಬ ಪದವೇ ಭಾರ
'ಹ್' ಎಂದರೂ ಹಾರಿಹೋಗಬಹುದು...

*

ತೇಲಿ ಬರುತಲಿದೆ ಪುಕ್ಕ
ಇನ್ನೂ ಇಳಿಸಿ
ಹಕ್ಕಿಯ ತೂಕ

*

ಹಾರಿಹೋಯಿತು ಹಕ್ಕಿ
ಆಗಸದಲಿ ಲೀನವಾದಂತೆ
ಮಂಜಿನ ಹೊಗೆ

*

ತಂತಿ ಮೇಲೆ ಕುಳಿತ
ತೆಳುವಾದ ಹಕ್ಕಿ ಬಾಯಲ್ಲಿ
ಎತ್ತಿ ಹಿಡಿದಿದೆ
ನೂಲಿನಂತಹ ಕಡ್ಡಿ
ಇಲ್ಲಿನ ತೃಣತೃಣಕು
ಎಂಥ ಘನತೆ!

*

ಉರಿ ಹತ್ತಿದೆ ರೆಕ್ಕೆಗೆ
ನಶೆ ಏರಿದೆ ಗಾಳಿಗೆ
ತೂಗುತ್ತಿದೆ ಗೂಡು
ಎಷ್ಟು ಹೊತ್ತಾದರೂ